**ದಿನಾಂಕ:27.11.2013ರಂದು ಮಧ್ಯಾಹ್ನ 2.30 ಗಂಟೆಗೆ ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕೌನ್ಸಿಲ್ ಸಭಾಂಗಣದಲ್ಲಿ ನಿರ್ದೇಶಕರು, ಮಿಮ್ಸ್ ಮಂಡ್ಯರವರ ಅಧ್ಯಕ್ಷತೆಯಲ್ಲಿ ನಡೆದ ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕಛೇರಿ ಸಿಬ್ಬಂದಿಗಳ ಸಭೆಯ ನಡಾವಳಿಗಳು.**

ನಿರ್ದೇಶಕರು ಮೇಲ್ಕಂಡ ಸಭೆಯಲ್ಲಿ ಹಾಜರಾಗಿದ್ದ ಕಛೇರಿಯ ಎಲ್ಲಾ ಸಿಬ್ಬಂದಿಗಳನ್ನು ಸಭೆಗೆ ಸ್ವಾಗತಿಸಿದರು. ಸಭೆಯಲ್ಲಿ ಸಾಮಾನ್ಯ ವಿಷಯಗಳನ್ನು ಚರ್ಚಿಸಲಾಯಿತು. ಈ ಕೆಳಕಂಡ ವಿಷಯಗಳನ್ನು ಸಭೆಯಲ್ಲಿ ನಿರ್ದೇಶಕರು ವಿವರಿಸಿದರು.

1) ಕಛೇರಿಯ ಎಲ್ಲಾ ಸಿಬ್ಬಂದಿಗಳಿಗೂ ದಿನಚರಿಯನ್ನು ಬರೆಯಲು ಈಗಾಗಲೇ ತಿಳಿಸಿದ್ದರೂ ಸಹ ಕೆಲವೊಂದು ಸಿಬ್ಬಂದಿಗಳನ್ನು ಹೊರತುಪಡಿಸಿ ಇನ್ನಿತರ ಸಿಬ್ಬಂದಿಗಳು ದಿನಚರಿಯನ್ನು ಬರೆಯದಿರುವ ಬಗ್ಗೆ ತಿಳಿಸಿ ಇನ್ನು ಮುಂದೆ ಪ್ರತಿದಿನ ದಿನಚರಿಯನ್ನು ಬರೆದು ವಾರದ ಕೊನೆಯಲ್ಲಿ ಕಛೇರಿ ಅಧೀಕ್ಷಕರ ಮುಖಾಂತರ ತಲುಪಿಸಲು ಸೂಚಿಸಿದರು. ಹಾಗೂ ಕಛೇರಿ ಅಧೀಕ್ಷಕರುಗಳು ಪ್ರತಿ ಎರಡು ದಿನಗಳಿಗೊಮ್ಮೆ ದಿನಚರಿಯನ್ನು ಪರಿಶೀಲಿಸಲು ನಿರ್ದೇಶಕರು ಸೂಚಿಸಿದರು.

2) ಬೆಳಗಾವಿಯಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನ ಮುಗಿಯುವ ವರೆಗೂ ಆಗಿದ್ದಾಂಗೆ ಮಾಹಿತಿಯನ್ನು ಸರ್ಕಾರಕ್ಕೆ ಒದಗಿಸಬೇಕಾಗಿರುವುದರಿಂದ ಮಾಹಿತಿಯನ್ನು ಒದಗಿಸಲು ಅನುಕೂಲವಾಗುವಂತೆ ಎಲ್ಲಾ ಸಿಬ್ಬಂದಿಗಳು ಕಡ್ಡಾಯವಾಗಿ ಕೇಂದ್ರಸ್ಥಾನದಲ್ಲೆ ಇರಬೇಕೆಂದು ನಿರ್ದೇಶಕರು ಎಲ್ಲಾ ಸಿಬ್ಬಂದಿಗಳಿಗೂ ಸೂಚಿಸಿದರು.

3) ಸಂಸ್ಥೆಯಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ವಿಷಯನಿರ್ವಾಹಕರು ತಮ್ಮ ಕಡತಕ್ಕೆ ಸಂಬಂಧಪಟ್ಟ ಗಣಕೀಕರಣ ಕೆಲಸವನ್ನು ತಾವೇ ನಿರ್ವಹಿಸಲು ಈಗಾಗಲೇ ಸೂಚಿಸಿ ಗಡುವನ್ನು ನೀಡಿದ್ದರೂ ಸಹ ಯಾರು ಸಹ ಗಣಕಯಂತ್ರವನ್ನು ನಿರ್ವಹಸಿದಿರುವ ಬಗ್ಗೆ ಮತ್ತೊಮ್ಮೆ ತಿಳಿಸುತ್ತಾ ಇನ್ನು ಮುಂದೆ ತಮ್ಮ ತಮ್ಮ ಕಡತಗಳಿಗೆ ಸಂಬಂಧಿಸಿದ ಗಣಕೀಕರಣ ಕಾರ್ಯವನ್ನು ಕಡ್ಡಾಯವಾಗಿ ತಾವೇ ಮಾಡಿಕೊಳ್ಳಬೇಕೆಂದು ಮತ್ತೊಂದು ಬಾರಿ ನಿರ್ದೇಶಕರು ಸಿಬ್ಬಂದಿಗಳಿಗೆ ಸೂಚಿಸಿದರು.

4) ಸಂಸ್ಥೆಯಿಂದ ಸರ್ಕಾರಕ್ಕೆ ಯಾವುದಾದರೂ ಮಾಹಿತಿಗಳನ್ನು ಕೇಳಿದಾಗ ನಿಖರವಾದ ಮಾಹಿತಿಗಳನ್ನು ನಿಗಧಿತ ಸಮಯಕ್ಕಿಂತ ಮುಂಚೆ ಸರ್ಕಾರಕ್ಕೆ ಸಲ್ಲಿಸಬೇಕೆಂದು ಕಛೇರಿಯ ಎಲ್ಲಾ ಸಿಬ್ಬಂದಿಗಳಿಗೂ ನಿರ್ದೇಶಕರು ತಿಳಿಸಿದರು.

5) ಎಲ್ಲಾ ವಿಷಯ ನಿರ್ವಾಹಕರುಗಳು ತಮಗೆ ಸಂಬಂಧಪಟ್ಟ ಕಡತಗಳನ್ನು ಸರಿಯಾಗಿ ಪರಿಶೀಲಿಸಿ ಎಲ್ಲಾ ಮಾಹಿತಿಗಳನ್ನು ಕ್ರೂಢೀಕರಿಸಿ ಪಟ್ಟಿಮಾಡಿ ಇಟ್ಟುಕೊಳ್ಳಲು ಸೂಚಿಸಿ ಹಾಗೂ ಮಾಹಿತಿಗಳು ಅವಶ್ಯಕತೆಯಿದ್ದ ಸಂದರ್ಭದಲ್ಲಿ ಮಾಹಿತಿಗಳನ್ನು ಕೇಳಿದ ತಕ್ಷಣ ಒದಗಿಸಲು ಅನುಕೂಲವಾಗುವಂತೆ ಕಡತಗಳನ್ನು ಇಟ್ಟುಕೊಳ್ಳಲು ನಿರ್ದೇಶಕರು ಸೂಚಿಸಿದರು.

6) ಸಂಸ್ಥೆಗೆ ಸಂಬಂಧಪಟ್ಟ ನೌಕರರುಗಳ Service Book ಗಳನ್ನು ಆಗಿದ್ದಾಂಗೆ Update ಮಾಡಲು ಸಂಬಂಧಪಟ್ಟ ವಿಷಯ ನಿರ್ವಾಹಕರಿಗೆ ನಿರ್ದೇಶಕರು ಸೂಚಿಸಿದರು.

7) ವಿಷಯ ನಿರ್ವಾಹಕರುಗಳು ಬೀರುವಿನಲ್ಲಿ ಕಡತಗಳನ್ನು ಕ್ರಮಬದ್ಧವಾಗಿ ಜೋಡಿಸದೆ ಇಡುತ್ತಿದ್ದು, ತುರ್ತು ಸಂದರ್ಭದಲ್ಲಿ ಕಡತಗಳು ಸಿಗದೆ ತಡವಾಗುತ್ತಿರುವುದರಿಂದ, ಇನ್ನು 03 ದಿನದೊಳಗಾಗಿ ತಮಗೆ ಸಂಬಂಧಪಟ್ಟ ಕಡತಗಳನ್ನು ಬೀರುಗಳಲ್ಲಿ ಕ್ರಮವಾಗಿ ಜೋಡಣೆ ಮಾಡಿ ಇಡುವಂತೆ ಸೂಚಿಸಿದರು.

8) ವಿಷಯ ನಿರ್ವಾಹಕರುಗಳು ತಮ್ಮ ಕಡತಗಳಿಗೆ ಸಂಬಂಧಪಟ್ಟಂತೆ ಸರ್ಕಾರದಿಂದ ಬಂದಂತಹ ಪತ್ರಗಳು ಹಾಗೂ ಸಂಸ್ಥೆಯಿಂದ ಸರ್ಕಾರಕ್ಕೆ ಹೋದಂತಹ ಪತ್ರಗಳ ಪ್ರತಿಗಳನ್ನು ಹೆಚ್ಚುವರಿಯಾಗಿ ಒಂದು ಕಡತದಲ್ಲಿ ಇಡುವಂತೆ ನಿರ್ದೇಶಕರು ಸೂಚಿಸಿದರು.

9) ಕಛೇರಿಯ ವಿಷಯನಿರ್ವಾಹಕರುಗಳು ತಾವು ರಜೆ ಹೋದ ಸಮಯದಲ್ಲಿ ಅಥವಾ ಕಛೇರಿ ವೇಳೆ ಮುಗಿದ ನಂತರದ ಸಂದರ್ಭದಲ್ಲಿ ತುರ್ತಾಗಿ ಯಾವುದಾದರು ಕಡತಗಳು ಅವಶ್ಯಕತೆಯಿದ್ದಲ್ಲಿ ಅಂತವುಗಳನ್ನು ತೆಗೆದುಕೊಳ್ಳಬೇಕಾಗಿರುವುದರಿಂದ, ತಮ್ಮ ತಮ್ಮ ಬೀರುವಿನ ಒಂದು ಕೀ ಅನ್ನು ಕಛೇರಿ ಅಧೀಕ್ಷಕರ ಹತ್ತಿರ ಕೊಡಲು ನಿರ್ದೇಶಕರು ಎಲ್ಲಾ ವಿಷಯ ನಿರ್ವಾಹಕರುಗಳಿಗೆ ಸೂಚಿಸಿದರು.

10) ಸಂಸ್ಥೆಯ ಕಛೇರಿ ಸಿಬ್ಬಂದಿಗಳಿಗೆ ತರಬೇತಿ ನೀಡುವ ಸಂಬಂಧ ಬೆಳಗ್ಗೆ ಅಥವಾ ಮಧ್ಯಾಹ್ನದ ಸಮಯದಲ್ಲಿ ಜಿಲ್ಲಾ ತರಬೇತಿ ಸಂಸ್ಥೆ, ಮಂಡ್ಯ ಇವರಿಂದ ಸಂಸ್ಥೆಯಲ್ಲಿ ತರಬೇತಿಯನ್ನು 2 ವಿಭಾಗಗಳಾಗಿ ವಿಂಗಡಣೆ ಮಾಡಿ ತರಬೇತಿಯನ್ನು ನೀಡುವುದಾಗಿ ಎಲ್ಲಾ ಸಿಬ್ಬಂದಿಗಳಿಗೂ ನಿರ್ದೇಶಕರು ತಿಳಿಸಿದರು.

ನಿರ್ದೇಶಕರು,
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಮಂಡ್ಯ.